# ಅಧ್ಯಾಯ – 3

## ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ

**[ಸೆಕ್ಷನ್ 4(1) (ಬಿ) (iii)]**

ನಿರ್ದೇಶಕ ಮಂಡಳಿಯು ನಿಗಮದ ಉನ್ನತ ಪ್ರಾಧಿಕಾರವಾಗಿರುತ್ತದೆ. ಮಂಡಳಿಯು ನಿಗಮದ ಪ್ರಮುಖ ವಿಷಯಗಳ ಕುರಿತು ತೀರ್ಮಾನಗಳನ್ನು ಕೈಗೊಳ್ಳುತ್ತದೆ. ಸುಗಮ ಆಡಳಿತ ನಿರ್ವಹಣೆಗಾಗಿ ಅಧಿಕಾರ ಪ್ರತ್ಯಾಯೋಜನೆಯ ಮೂಲಕ ಮಂಡಳಿಯು ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ನಿಗಮದ ಇತರೆ ಅಧಿಕಾರಿಗಳಿಗೆ ನಿರ್ದಿಷ್ಟ ಅಧಿಕಾರ ನೀಡಲಾಗಿರುತ್ತದೆ. ಕಾಲಕಾಲಕ್ಕೆ ಈ ಕುರಿತು ಪರಿಶೀಲಿಸಿ ಅಗತ್ಯತಾನುಸಾರ ಮಂಡಳಿಯು ತೀರ್ಮಾನ ಕೈಗೊಂಡು ನಿಗಮದ ಅಧಿಕಾರಿಗಳ ಮೂಲಕ ಕಾರ್ಯಚಟುವಟಿಕೆಗಳ ಮೇಲ್ವಿಚಾರಣಾ ವ್ಯವಸ್ಥೆ ಮಾಡಲಾಗಿದೆ. ತೀರ್ಮಾನ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಮೇಲ್ವಿಚಾರಣೆ, ಅಧಿಕಾರ ವ್ಯಾಪ್ತಿ ಹಾಗೂ ಹೊಣೆಗಾರಿಕೆಯ ಮಾರ್ಗಗಳ ಕುರಿತು ಅನುಸರಿಸಬೇಕಾದ ಕಾರ್ಯವಿಧಾನವನ್ನು ಸಾಂಸ್ಥಿಕ ನಕ್ಷೆಯಲ್ಲಿ ನಮೂದಿಸಿರುವಂತೆ ರೂಪಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿರುತ್ತಾರೆ. ಇವರ ಅಧೀನಕ್ಕೆ ಒಳಪಟ್ಟಂತೆ ನಿಗಮದಲ್ಲಿ ನಾಲ್ಕು ಪ್ರಕಾರ್ಯ ನಿರ್ದೇಶಕರಿದ್ದು, ನಿರ್ದೇಶಕರು (ಸಿ ಮತ್ತು ಪ)., ನಿರ್ದೇಶಕರು (ಭ & ಜಾ), ನಿರ್ದೇಶಕರು (ಕಾರ್ಯಾಚರಣೆ) ಮತ್ತು ನಿರ್ದೇಶಕರು (ತಾಂತ್ರಿಕ) ರವರ ಅಧಿಕಾರ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳು ಕಾರ್ಯ ನಿರ್ವಹಿಸುತ್ತಿವೆ.

ಈ ನಿರ್ದೇಶಕರುಗಳನ್ನು ಮತ್ತು ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರನ್ನು ಕರ್ನಾಟಕ ಸರ್ಕಾರವು ನೇಮಿಸುತ್ತದೆ. ನಿಗಮದ ಸಾಂಸ್ಥಿಕ ವಿನ್ಯಾಸವನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.

ನಿಗಮದಲ್ಲಿ ಕೇಂದ್ರ, ವಿಭಾಗ ಮತ್ತು ಘಟಕ – ಈ ಮೂರು ಹಂತಗಳಲ್ಲಿ ಕಾರ್ಯ ನಿರ್ವಹಣೆ ವ್ಯವಸ್ಥೆ ಇದೆ. ಈ ಮೂರು ಹಂತಗಳ ಆಡಳಿತ ವ್ಯವಸ್ಥೆಯ ವಿವರಗಳನ್ನು ಅನುಬಂಧ 1, 2 ಹಾಗೂ 3 ರಲ್ಲಿ ನೀಡಲಾಗಿದೆ.